**ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018.

**संस्कृतशिक्षणनिर्देशनालयः**
**कर्नाटकसंस्कृतविश्वविद्यालयः**
पम्पमहाकविमार्गः, चामराजपेटे, बेङ्गलूरु-५६००१८

ದಿನಾಂಕ: 21.12.2011

# ಸುತ್ತೋಲೆ

ವಿಷಯ : ಹೊಸದಾಗಿ ಸಂಸ್ಕೃತ/ವೇದ ಪಾಠಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ ಹಾಗೂ ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಮಾರ್ಗಸೂಚಿ ಅಂಶಗಳು.

ರಾಜ್ಯದಲ್ಲಿ ಹೊಸದಾಗಿ ಸಂಸ್ಕೃತ/ವೇದ ಪಾಠಶಾಲೆಗಳನ್ನು ಅನುಮತಿ ನೀಡುವ ವಿಚಾರದಲ್ಲಿ ಹಾಗೂ ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ.

1. ಹೊಸದಾಗಿ ಸಂಸ್ಕೃತ/ವೇದ ಪಾಠಶಾಲೆಯನ್ನು ತೆರೆಯಲು ಮನವಿ ಮಾಡಿರುವ ವಿದ್ಯಾಸಂಸ್ಥೆಗಳು ನೋಂದಾಯಿತ ಟ್ರಸ್ಟ್ ಅಥವಾ ಸೊಸೈಟಿಯಾಗಿರಬೇಕು.
2. ಶಾಲೆಯನ್ನು ಪ್ರಾರಂಭ ಮಾಡುವ ಸ್ಥಳದ 5 ಕಿ.ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ನೋಂದಾಯಿತ ಸಂಸ್ಕೃತ/ವೇದ ಪಾಠಶಾಲೆ ಇರಬಾರದು.
3. ಪಾಠಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯು ಸ್ವಂತ ಅಥವಾ ಉಚಿತ ಕಟ್ಟಡವನ್ನು ಹೊಂದಿದ್ದು ಕನಿಷ್ಠ ಪಕ್ಷ 2 ಅಥವಾ 3 ಕೊಠಡಿಗಳನ್ನು ಹೊಂದಿರಬೇಕು. ಹಾಗೂ ಮೂಲಭೂತ ಸೌಲಭ್ಯವನ್ನು ಹೊಂದಿರಬೇಕು. ಮತ್ತು ಕಟ್ಟಡದ ನಕ್ಷೆಯನ್ನು ಸಲ್ಲಿಸಬೇಕು.
4. ರೂ. 5000/- (ಐದು ಸಾವಿರ)ಗಳ ಸ್ಥಿರನಿಧಿ ಠೇವಣಿಯನ್ನು ನಿರ್ದೇಶಕರು ಮತ್ತು ಸಂಸ್ಥೆಯ ಮುಖ್ಯಸ್ಥರ ಹೆಸರಿನಲ್ಲಿ ಜಂಟಿಯಾಗಿ ಇಡತಕ್ಕದ್ದು. ಕಾಲಕಾಲಕ್ಕೆ ಈ ಠೇವಣಿಯನ್ನು ಪರಿಷ್ಕರಿಸಲಾಗುವುದು.
5. ಪಾಠಶಾಲೆಯು ಪ್ರಾರಂಭದಲ್ಲಿ ಕನಿಷ್ಠ 20-25 ವಿದ್ಯಾರ್ಥಿಗಳನ್ನು ಹೊಂದಿರಬೇಕು.
6. ತರಗತಿಗಳನ್ನು ನಡೆಸಲು ಅಗತ್ಯವಾದ ಪೀಠೋಪಕರಣಗಳನ್ನು ಹೊಂದಿರತಕ್ಕದ್ದು ಮತ್ತು ಅದರ ವಿವರಗಳನ್ನು ಕಛೇರಿಗೆ ಸಲ್ಲಿಸತಕ್ಕದ್ದು. ಪಾಠಶಾಲೆಯಲ್ಲಿ ಅಗತ್ಯವಾದ ಗ್ರಂಥಾಲಯವನ್ನು ಹೊಂದಿರತಕ್ಕದ್ದು. ಮತ್ತು ಗ್ರಂಥಾಲಯದಲ್ಲಿರುವ ಪುಸ್ತಕಗಳ ಪಟ್ಟಿಯನ್ನು ಸಲ್ಲಿಸತಕ್ಕದ್ದು.
7. ಪಾಠಶಾಲೆಯು ಅಗತ್ಯವಾದ ಗ್ರಂಥಾಲಯವನ್ನು ಹೊಂದಿರತಕ್ಕದ್ದು. ಮತ್ತು ಗ್ರಂಥಾಲಯದಲ್ಲಿರುವ ಪುಸ್ತಕಗಳ ಪಟ್ಟಿಯನ್ನು ಸಲ್ಲಿಸತಕ್ಕದ್ದು.
8. ನಿರ್ದೇಶನಾಲಯವು ನಿಗದಿಪಡಿಸಿರುವ ದಾಖಲೆ ಪುಸ್ತಕಗಳನ್ನು ನಿರ್ವಹಿಸಬೇಕು.
9. ಶಾಶ್ವತವಾಗಿ ಸರ್ಕಾರದಿಂದ ಅನುದಾನವನ್ನು ಬಯಸುವುದಿಲ್ಲವೆಂದು ಷರತ್ತಿಗೆ ಒಳಪಟ್ಟು 20 ರೂ.ಗಳ ಛಾಪಾ ಕಾಗದದಲ್ಲಿ ಒಪ್ಪಿಗೆ ಪ್ರಮಾಣಪತ್ರವನ್ನು ಆಡಳಿತ ಮಂಡಳಿಯು ಸಲ್ಲಿಸಬೇಕು.
10. ಪಾಠಶಾಲೆಯಲ್ಲಿ ನಡೆಯುವ ತರಗತಿಗಳಿಗೆ ಅನುಗುಣವಾದ ವಿದ್ಯಾರ್ಹತೆಯನ್ನು ಹೊಂದಿರುವ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕು.
11. ಆಡಳಿತಮಂಡಳಿಯು ಪಾಠಶಾಲೆಯನ್ನು ಪ್ರಾರಂಭಿಸಲು ನಮೂನೆ-1 ಅನ್ನು ಭರ್ತಿಮಾಡಿ ಸಲ್ಲಿಸಿರಬೇಕು.
12. ಆಡಳಿತಮಂಡಳಿಯು ಪಾಠಶಾಲೆಯ ಮಾನ್ಯತೆಯನ್ನು ಪಡೆಯಬೇಕಾದರೆ ನಮೂನೆ-2 ಅನ್ನು ಭರ್ತಿಮಾಡಿ ಅಗತ್ಯ ಮಾಹಿತಿಗಳೊಂದಿಗೆ ಸಲ್ಲಿಸಿರಬೇಕು.
13. ಶಾಲೆಗೆ ಭೇಟಿ ನೀಡಿ ವರದಿ ಸಲ್ಲಿಸಿರುವ ನಿರ್ದೇಶನಾಲಯದಿಂದ ನಿಯೋಜಿತ ಅಧಿಕಾರಿಯ ಮೂಲ ಭೇಟಿ ವರದಿ ಹಾಗೂ ಸ್ಪಷ್ಟ ಅಭಿಪ್ರಾಯವನ್ನು ಹೊಂದಿರಬೇಕು.

14. ಶಾಲೆ ಪ್ರಾರಂಭಿಸಲು ಶಾಲಾ ಅಡಳಿತ ಮಂಡಳಿಯ ಎಲ್ಲಾ ಸದಸ್ಯರು ಸೇರಿ ಸಭೆ ನಡೆಸಿ ಮಾಡಿದ ಠರಾವಿನ ಮೂಲ ಪ್ರತಿ ಸಲ್ಲಿಸಬೇಕು.
15. ಸಂಸ್ಕೃತ/ವೇದ ಪಾಠಶಾಲೆಗಳ ಅನುದಾನ ಸಂಹಿತೆ/ಪರಿನಿಯಮದಂತೆ ನಿಗದಿತ ಅವಧಿಯಲ್ಲಿ ಪ್ರಸ್ತಾವನೆಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಿರಬೇಕು.
16. ಆಡಳಿತಮಂಡಳಿಯ ಎಲ್ಲಾ ಸದಸ್ಯರ ವಿವರವಾದ ಪಟ್ಟಿಯನ್ನು ಪೂರ್ಣ ವಿಳಾಸದೊಂದಿಗೆ ಸಲ್ಲಿಸಬೇಕು.
17. ಆಡಳಿತಮಂಡಳಿಯ ಸದಸ್ಯರು ಒಂದೇ ಕುಟುಂಬದ ಸದಸ್ಯರಲ್ಲದ ಬಗ್ಗೆ ಹಾಗೂ ಯಾವುದೇ ಸರ್ಕಾರಿ ನೌಕರರು ಈ ಆಡಳಿತಮಂಡಳಿಯಲ್ಲಿ ಇರುವುದಿಲ್ಲ ಎಂಬ ಬಗ್ಗೆ 20 ರೂ.ಗಳ ಛಾಪಾ ಕಾಗದಲ್ಲಿ ದೃಢೀಕರಣ ಪತ್ರವನ್ನು ನೀಡಬೇಕು.
18. ಆಡಳಿತಮಂಡಳಿಯು ಸಲ್ಲಿಸಿರುವ ಪ್ರಸ್ತಾವನೆಯ ಮೇರೆಗೆ ಶಿಫಾರಸ್ಸು ಮಾಡುವ ಅಧಿಕಾರಿಯ ನಿರ್ದಿಷ್ಟ ಅಭಿಪ್ರಾಯ ಇರಬೇಕು.
19. ಆಡಳಿಮಂಡಳಿಯು ಸಲ್ಲಿಸಿರುವ ಪ್ರಸ್ತಾವನೆಯ ಮೂಲ ದಾಖಲಾತಿಗಳನ್ನು ಪರಿಶೀಲಿಸಿ ತಪಾಸಣಾಧಿಕಾರಿಯು ಪಾಠಶಾಲೆ ಪ್ರಾರಂಭಿಸಲು ಅಥವಾ ಮಾನ್ಯತೆ ನವೀಕರಿಸಲು ದೃಢೀಕರಿಸಬೇಕು.
20. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಂಸ್ಥೆಯಾಗಿದ್ದಲ್ಲಿ ಅದರ ಬಗ್ಗೆ ತಹಶೀಲ್ದಾರರವರಿಂದ ದೃಢೀಕರಣ ಪತ್ರವನ್ನು ಒದಗಿಸಬೇಕು.
21. ಸಂಸ್ಕೃತ ಸಾಹಿತ್ಯ ತರಗತಿಗಳನ್ನು ಆರಂಭ ಮಾಡುವ ವಿಷಯದಲ್ಲಿ ಪ್ರತ್ಯೇಕವಾದ ಪ್ರಸ್ತಾವನೆಯೊಂದನ್ನು ಕಳುಹಿಸಬೇಕು. ಈ ಬಗ್ಗೆ ಪೂರ್ಣ ಪರಿಶೀಲನೆಯ ನಂತರವೇ ಕ್ರಮ ತೆಗೆದುಕೊಳ್ಳುವುದು.
22. ಹೊಸದಾಗಿ ಸಂಸ್ಕೃತ/ವೇದ ಪಾಠಶಾಲೆಗಳನ್ನು ಪ್ರಾರಂಭಿಸಲು ಅನುಮತಿ ಅಥವಾ ಮಾನ್ಯತೆ ನವೀಕರಣಕ್ಕಾಗಿ ಶಾಲಾ ಆಡಳಿತಮಂಡಳಿಯು ಪ್ರಸ್ತಾವನೆಯನ್ನು ಮೇಲ್ಕಂಡ ವಿವರಗಳೊಂದಿಗೆ 2012 ಮಾರ್ಚ್ 31ರ ಒಳಗಾಗಿ ನಿರ್ದೇಶನಾಲಯಕ್ಕೆ ಕಳುಹಿಸಲು ಕೋರಲಾಗಿದೆ.

Sivana

**ನಿರ್ದೇಶಕರು**
ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ
ಬೆಂಗಳೂರು